


**ಉತ್ತಮ ತಾಂತ್ರಿಕ ವಿವರ**

'ಡೀಸೆಲ್ ಬೈಕ್ ಫ್ಲಾಪ್ ಷೋ?' ಆರ್.ಜಯಸಿಂಹ ಅವರ ಮುಖಪುಟ ಲೇಖನ (ಸುಧಾ 8 ಮಾರ್ಚ್) ಚೆನ್ನಾಗಿದೆ. ಡೀಸೆಲ್ ಬೈಕ್‌ಗಳು ಮಾರುಕಟ್ಟೆಗೆ ಬಂದರೆ ಗ್ರಾಹಕರಿಗೆ ಮೈಲೇಜ್ ಲಾಭವಿದೆ. ಆದರೆ ರಾಯಲ್ ಎನ್‌ಫೀಲ್ಡ್ ಡೀಸೆಲ್ ಬೈಕ್ ವಿಫಲವಾಯಿತು. ಲೇಖನದಲ್ಲಿ ಉತ್ತಮ ತಾಂತ್ರಿಕ ವಿವರಗಳಿವೆ.

–ಸತೀಶ್‌ಕುಮಾರ್ ಜಿ.ಎಸ್. ಬೆಂಗಳೂರು

**ಆಸಕ್ತಿ ಮೂಡಿಸಲಿಲ್ಲ**

ಡೀಸೆಲ್ ಬೈಕ್ ಲೇಖನ ಆಸಕ್ತಿ ಮೂಡಿಸಲಿಲ್ಲ. ಶ್ರೀಮಂತರ ಅಟ್ಟಹಾಸವನ್ನು ಶಬ್ದದ ಮೂಲಕ ಹೊರ ಹಾಕುವ ಈ ಬೈಕುಗಳನ್ನು ಮೊದಲು ಬ್ಯಾನ್ ಮಾಡಬೇಕು.

–ಪ. ಚಂದ್ರಕುಮಾರ ಗೌನಹಳ್ಳಿ

**ವಿಚಾರ ಲಹರಿ**

ವಿಚಾರ ಲಹರಿಯಲ್ಲಿ 'ಬಟ್ಟೆಗೆ ಲಿಂಗ ಭೇದ ಇಲ್ಲ' (ತೋಪ) ಬರಹ ಚೆನ್ನಾಗಿದೆ.

–ಕೆ.ಎಂ. ಮಧ್ವರಾಯ, ಬೆಂಗಳೂರು

**ಬೆಳಕು ಚೆಲ್ಲಿದೆ**

'ನಿಮ್ಮೊಡನೆ'ಯಲ್ಲಿ 'ಆಸ್ಪತ್ರೆಯ ವೆಚ್ಚ ತಗ್ಗಿಸಿ' (ಬಿ.ಎಂ. ಹನೀಫ್) ಬರಹ ಆಸ್ಪತ್ರೆಯ ಪ್ರಸ್ತುತ ವಿದ್ಯಮಾನಗಳ ಮೇಲೆ ಬೆಳಕು ಚೆಲ್ಲಿದೆ.

–ಮಹಾವೀರ ಕಾಸರ, ಶಿವಮೊಗ್ಗ, ರಾಜಶೇಖರ ಹಾದಿಮನಿ ಧಾರವಾಡ, ಎಚ್.ಆನಂದಕುಮಾರ್ ಚಿತ್ರದುರ್ಗ, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

**ಉಪಯುಕ್ತ ಲೇಖನ**

ಆರೋಗ್ಯ ಪುಟದಲ್ಲಿ 'ಯುವಜನರಲ್ಲಿ ಅನಿರೀಕ್ಷಿತ ಹೃದಯಾಘಾತ' (ಡಾ. ಸದಾನಂದ ಬಿ. ನಾಯ್ಕ್) ಲೇಖನ ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಅಕಾಲಿಕ ಸಾವುಗಳು ಹೃದಯಘಾತಗಳಿಂದಲೇ ಎಂಬುದು ತಪ್ಪುಕಲ್ಪನೆ. ಹೃದಯಾಘಾತ ಹೆಚ್ಚಲು ಕಾರಣ, ಇದಕ್ಕೆ ಮುನ್ಸೂಚನೆ, ಮುನ್ನೆಚ್ಚರಿಕೆ ಕ್ರಮಗಳೇನು? ಮುಂತಾದ ವಿಚಾರಗಳ ಬಗ್ಗೆ ವಿವರವಾಗಿ ತಿಳಿಸಿದ್ದಾರೆ.

–ಗಾಣಧಾಳು ರಾಮಣ್ಣ, ಚಿತ್ರದುರ್ಗ, ರತ್ನಾಕರ ಹೆಗಡೆಕಟ್ಟೆ ಮೂಡಬಿದಿರೆ

**ಜೀವನಶೈಲಿಯ ಸಮಸ್ಯೆ!**

ಹೃದ್ರೋಗ ಹಾಗೂ ತ್ವರಿತ ಸಾವಿನ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಯುವಕರಲ್ಲಿಯೂ ಕಂಡುಬರುತ್ತಿರುವುದು ಸತ್ಯ ಸಂಗತಿ. ಮಾನಸಿಕ ಒತ್ತಡಗಳು ಹಾಗೂ ಬದಲಾಗುತ್ತಿರುವ ಆಧುನಿಕ ಜೀವನಶೈಲಿ ಇದಕ್ಕೆ ಕಾರಣವಿರಬಹುದು.

ಕೆಲವು ವರ್ಷಗಳ ಹಿಂದೆ ಎದೆನೋವು ಎಂಬ ಕಾರಣಕ್ಕೆ ಯುವಕನೊಬ್ಬನನ್ನು ವೈದ್ಯ ಮಿತ್ರರೊಬ್ಬರು ತಕ್ಷಣವೇ ನನ್ನಲ್ಲಿಗೆ ಕಳುಹಿಸಿದ್ದರು. ಇಸಿಜಿ ತೆಗೆದು ವಾರ್ಡಿಗೆ ಸೇರಿಸಿ, ಚಿಕಿತ್ಸೆ ನೀಡುವ ಮೊದಲೇ ಆತ ತೀರಿಕೊಂಡ. ಆತನ ಸೋದರ ಒಂದೆರಡು ವರ್ಷಗಳ ಬಳಿಕ ಅದೇ ವೈದ್ಯರ ಸಲಹೆಯಂತೆ ನನ್ನಲ್ಲಿಗೆ ಬಂದಿದ್ದ. ಇಸಿಜಿ ತೆಗೆದು ಮಾಹಿತಿ ಕಳುಹಿಸುವ ಮೊದಲೇ ಆತ ಪ್ರಾಣ ಬಿಟ್ಟಿದ್ದ. ಇಂತಹ ಪ್ರಕರಣಗಳನ್ನು ಮುಂದಾಗಿಯೇ ಪತ್ತೆ ಹಚ್ಚುವ ಅಗತ್ಯ ಖಂಡಿತಾ ಇದೆ.

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

**ಮನಗೆದ್ದ ಸಿನಿಮಾ ನಟಿಯರು**

'ಹೆಣ್ಣು ಸಿನಿಮಾದ ಕಣ್ಣು' (ಚ.ಹ. ರಘುನಾಥ) ಲೇಖನ ಸ್ತುತ್ಯಾರ್ಹ. ಇವರು ಉಲ್ಲೇಖಿಸಿರುವ ನಾಯಕಿ ನಟಿಯರು ಈಗಲೂ ನಮ್ಮ ನಡುವೆ ಇದ್ದಾರೆ. ಕನ್ನಡಿಗರ ಮನದಲ್ಲಿಯೂ ನೆಲೆಸಿದ್ದಾರೆ. ಲೇಖನದ ಜತೆಗೆ ತಮ್ಮ ರೂಪು ಲಾವಣ್ಯದಿಂದ ರಸಿಕರ ಮನ ಗೆದ್ದ ನಟಿ ಭಾರತಿ, ಮಂಜುಳಾರ ಫೋಟೊ ಹಾಕಬೇಕಿತ್ತು. ಕನ್ನಡ ಚಿತ್ರರಂಗದ ಮತ್ತೊಂದು ಶಕ್ತಿ ಪಾರ್ವತಮ್ಮ ರಾಜ್‌ಕುಮಾರ್.

–ಬಿ.ಎಸ್. ರಮೇಶ್, ಶ್ರೀನಾಥ್ ಕೊನೇಟಿ ಬೆಂಗಳೂರು, ತೂರಗಲ್ಲ ಸುಶೀಲಾ ರಾಮದುರ್ಗ

**ನೆನೆಸಬಹುದಿತ್ತು..**

'ಹೆಣ್ಣು ಸಿನಿಮಾ ಕಣ್ಣು'– ನಾಯಕಿ ನಟಿಯರ ಮೇಲೊಂದು ಅವಲೋಕನ ಸಮರ್ಪಕವಾಗಿದೆ. ಹರಿಣಿ (ಕನ್ಯಾದಾನ, ನಂದಾದೀಪ, ನಾಂದಿ, ಮಂಗಳ ಮುಹೂರ್ತ, ಧರ್ಮವಿಜಯ), ಸಾಹುಕಾರ ಜಾನಕಿ (ರತ್ನಗಿರಿ ರಹಸ್ಯ, ಮಹಿಷಾಸುರ ಮರ್ಧಿನಿ, ನವ ಕೋಟಿ ನಾರಾಯಣ, ಗೌರಿ), ವಂದನಾ (ಲಾಯರ್ ಮಗಳು, ತಾಯಿ ಕರುಳು, ಬಂಗಾರಿ), ಕೃಷ್ಣಾ ಕುಮಾರಿ (ಭಕ್ತಕನಕದಾಸ, ಶ್ರೀಶೈಲ ಮಹಾತ್ಮೆ, ಸತಿ ಅನಸೂಯ) ಮರೆಗೆ ಸರಿದರೇನೊ!

ಬಿ. ಸರೋಜಾದೇವಿ –ಬಬ್ರುವಾಹನದಲ್ಲಿ ದ್ವಿಪಾತ್ರದ ರಾಜಕುಮಾರ್‌ಗೆ ಪ್ರಣಯಿನಿ ಚಿತ್ರಾಂಗದಾ ಮತ್ತು ತಾಯಿಯಾಗಿ ನಟಿಸಿದ ಅಪರೂಪದ ಚಿತ್ರ. ಲೀಲಾವತಿ– ಮೊದಲು ನಾಯಕಿ ಆಗಿದ್ದವರು 70ರ ದಶಕದಲ್ಲಿ ನಾಯಕ ನಟರಿಗೆ ಅತ್ತೆ, ತಾಯಿ, ಅಕ್ಕ ಆಗಿ ಪ್ರತಿಭೆ ಮೆರೆದವರು.

ಸಂಧ್ಯಾ– ಮಹಿಷಾಸುರ ಮರ್ದಿನಿಯ ಚಾಮುಂಡಿ, ಪ್ರೇಮದ ಪುತ್ರಿಯ ಅಮ್ಮ.

ಆದವಾನಿ ಲಕ್ಷ್ಮಿ – 'ಮನೆ ತುಂಬಿದ ಹೆಣ್ಣು' ಮಲಮಗಳಾಗಿ, 'ಕಲಿತರೂ ಹೆಣ್ಣೆ' ಗೌಡಿತಿಯಾಗಿ! ಈಕೆಯ ಮಗಳು ರೂಪಾದೇವಿ 80 ದಶಕದಲ್ಲಿ ಕೆಲವು ಚಿತ್ರಗಳಲ್ಲಿ ನಾಯಕಿಯಾಗಿದ್ದರು.

ಜಯಲಲಿತಾ– ನನ್ನ ಕರ್ತವ್ಯ (1966), ಬದುಕುವ ದಾರಿ (1967), ಚಿನ್ನದ ಗೊಂಬೆ (1968), ಮಾವನ ಮಗಳು ಚಿತ್ರಗಳ ನಾಯಕಿ. ಕಲ್ಯಾಣ ಕುಮಾರ್ ನಾಯಕರಾಗಿದ್ದು ವಿಶೇಷ. ಇವರೆಲ್ಲರನ್ನೂ ನೆನೆಸಬಹುದಿತ್ತು.

–ಸರ್ವಜಿತ್ ಹುಬ್ಬಳ್ಳಿ

**ಜೀವಜಲ ಕಾಪಿಡುವ ಪರಿ**

'ಕೃಷಿಕನ ಜಲ ಸಾಹಸ' (ಶಂಕರ ಸಾರಡ್ಕ) ಲೇಖನ ಚೆನ್ನಾಗಿದೆ. ಅಡ್ಯನಡ್ಕದ ಶಶಿಧರ್ ಭಟ್ ಕೃಷಿಕರ ಮುಂದಾಲೋಚನೆಯಿಂದ ತಮ್ಮ ಸ್ವಂತ ಖರ್ಚಿನಿಂದಲೇ ಸೀರೆ ಹೊಳೆಗೆ ಕಟ್ಟೆ ಕಟ್ಟುವ ಕೆಲಸ ಮಾಡಿದ್ದು ಮೆಚ್ಚುವಂತಹುದು.

–ಸುಂದರ್, ಬೆಂಗಳೂರು

**ಉಲ್ಲಾಸದಿಂದಿರಿ**

'ಹಿರಿಯರೆಂದರೆ ಏಕೆ ಈ ಅಸಡ್ಡೆ?' (ಮಾಲತಿ ಮುದಕವಿ) ಲೇಖನ ಚೆನ್ನಾಗಿದೆ. ಹಿರಿಯ ನಾಗರಿಕರು ಎಂದೂ ಉಲ್ಲಾಸದಿಂದ ನಗುನಗುತ್ತಿರಿ.

–ರುಕ್ಮಿಣಿ. ಕೃ. ದೇಶಪಾಂಡೆ, ಗೋಕಾಕ



